"ಯಾವುದೇ ಅನುಮೋದನೆಗಾಗಿ ಕಡತ ಮಂಡಿಸಿದೆ"

## ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: A7/LND/FC/Road/BGK/CR-/22-23/2024-25 /129

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ: 02-04-2025. 05

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ),
"ಅರಣ್ಯ ಭವನ",
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
**ಬೆಂಗಳೂರು**–3.

ಮಾನ್ಯರೇ,

ವಿಷಯ: Diversion of 0.7188 ha (revised from 0.7137 ha) of forest land in Sy No. 95 of Hoolageri village, Badami Taluk, Bagalkot District (Bagalkot Forest Division) for construction of Aprroach Road to Karthik Agro Industries Pvt. Ltd. in favour of Sri Karthik, vice president, Karthik Agro Industries Pvt. Ltd., Badami Taluk, Bagalkot District.

ಉಲ್ಲೇಖ:1) ಕೇಂದ್ರ ಸರಕಾರದ ಪತ್ರ ಸಂಖ್ಯೆ: 4-KRB1446/2023-BAN ದಿನಾಂಕ: 18–11–2024.

2) ತಮ್ಮ ಕಛೇರಿ ಪತ್ರ ಸಂಖ್ಯೆ: KFD/HoFF/A5-2(GFL)/31/2021-FC ದಿನಾಂಕ: 30–11–2024.

3) ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 12–12–2024.

4) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರ ಪತ್ರ ಸಂಖ್ಯೆ: ಬಿ2/ಜಿಎಫ್‌ಎಲ್/ಎಫ್‌ಸಿ/ರಸ್ತೆ/ಕಾ.ಅಗ್ರೋ/0.7137/2024–25 ದಿನಾಂಕ: 29–03–2025. (ಈ ಕಛೇರಿಗೆ ಸ್ವೀಕೃತವಾದ ದಿನಾಂಕ: 05–04–2025)

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಮತ್ತು (2) ರ ಪತ್ರಗಳಡಿ ನೀಡಿದ ನಿರ್ದೇಶನದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರು ಉಲ್ಲೇಖ (4) ರ ಪತ್ರದಡಿ ಈ ಕಛೇರಿಗೆ ವರದಿ ಸಲ್ಲಿಸುತ್ತಾ, ಮೇ: ಕಾರ್ತಿಕ ಅಗ್ರೊ ಇಂಡಸ್ಟ್ರೀಜ್, ಹೂಲಗೇರಿ ಇವರು ಅರಣ್ಯ ಪ್ರದೇಶದಲ್ಲಿ ಸಂಪರ್ಕ ರಸ್ತೆಯ ನಿರ್ಮಾಣಕ್ಕಾಗಿ ಅರಣ್ಯ ಜಮೀನು ಬಳಸಿಕೊಳ್ಳಲು ಅನುಮತಿ ಕೋರಿದ ಮಣ್ಣು ರಸ್ತೆಯನ್ನು 2005 ರಿಂದ ಈಚೆಗೆ ಕೆರಕಲಮಟ್ಟಿ ಗ್ರಾಮದ ರೈತರು ಅಪರೂಪಕ್ಕೆ ಎಂದರೆ ಬಿತ್ತನೆ, ರಾಶೀ ಸಮಯದಲ್ಲಿ ಉಪಯೋಗ ಮಾಡುತ್ತಿದ್ದು, ಇದೇ ರಸ್ತೆಯನ್ನು ಕಾರ್ತಿಕ ಅಗ್ರೋ ಫ್ಯಾಕ್ಟರಿಯವರು ಉಪಯೋಗಿಸುತ್ತಿದ್ದು ಸದರಿ ರಸ್ತೆ 2005 ರಿಂದ ಇದ್ದು, 1980 ರ ಪೂರ್ವದಲ್ಲಿ ನಿರ್ಮಾಣ ಮಾಡಿರುವುದಿಲ್ಲ. ಪ್ರಸ್ತುತ ಇರುವ ಮಣ್ಣಿನ ರಸ್ತೆಯ ಕುರಿತು ಪರಿಶೀಲಿಸಲಾಗಿ ಸದರಿ ರಸ್ತೆಗೆ ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ–1980 ರಡಿ ಅಥವಾ ಇನ್ನಿತರ ಯಾವುದೇ ಅರಣ್ಯ ಕಾಯ್ದೆಯಡಿ ಮಂಜೂರಾತಿಯನ್ನು ಪಡೆದುಕೊಂಡಿರುವುದು ಇರುವುದಿಲ್ಲ. ಆದ್ದರಿಂದ, ಪ್ರಸ್ತುತ ಉಪಯೋಗಿ ಸಂಸ್ಥೆಯವರು ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: FP/KA/ROAD/144076/2021 ನ್ನು ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ–1980 ರಡಿ ಪರಿಗಣಿಸಲು ಈ ಕಛೇರಿಗೆ ಕೋರಿರುತ್ತಾರೆ.

ಕಾರಣ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರ ಕೋರಿಕೆಯಂತೆ ಪ್ರಸ್ತುತ ಉಪಯೋಗಿ ಸಂಸ್ಥೆಯವರು ಪರಿವೇಶ್ ತಂತ್ರಾಂಶದಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: FP/KA/ROAD/144076/2021 ನ್ನು ವನ (ಸಂರಕ್ಷಣ ವಃ ಸಂವರ್ಧನ) ಅಧಿನಿಯಮ–1980 ರಡಿ ಪರಿಗಣಿಸಲು ತಮ್ಮಲ್ಲಿ ಗೌರವಪೂರ್ವಕವಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ,

ರವಾನಿಸಲಾಗಿದೆ
ದಿನಾಂಕ ...02-05-2025
ರವಾನೆ ಗುಮಾಸ್ತರ ಸಹಿ ........

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.